151ನೇ 2272 = (146)
4RR
270525

# ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಅ. ದೇವೇಗೌಡ ಇವರು ನಿಯಮ-72 ರ ಮೇರೆಗೆ ಮಂಡಿಸಿರುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಉತ್ತರ.**

***

**ವಿಷಯ:** ಗ್ರಾಮ ಪಂಚಾಯತಿಗಳಲ್ಲಿ ಕ್ರಯ ಪತ್ರದಂತೆ ಖಾತೆ, ಪೌತಿ ಖಾತೆ ಮಾಡುವ ಬಗ್ಗೆ ಒಂದು ತಿಂಗಳು ಕಾಲಾವಕಾಶ ನೀಡಿರುತ್ತೀರಿ ಹಾಗೂ ಸದರಿ ಒಂದು ಖಾತೆ ಮಾಡುವ ಬಗ್ಗೆ ಗ್ರಾಮ ಪಂಚಾಯತಿ ಸದಸ್ಯರುಗಳು ಮತ್ತು ಅಧ್ಯಕ್ಷರು ಗ್ರಾಮ ಪಂಚಾಯತಿಯ ಮಾಸಿಕ ಸಭೆ ಕರೆದು ಅನುಮೋದನೆ ಪಡೆಯುವ ಪದ್ಧತಿ ಇದ್ದು, ಈ ರೀತಿಯ ವ್ಯವಸ್ಥೆಯಿಂದ ಸಾರ್ವಜನಿಕರಿಗೆ ತುಂಬ ತೊಂದರೆಯಾಗುತ್ತಿದೆ. ಆದ್ದರಿಂದ ಕಂದಾಯ ಇಲಾಖೆಯಲ್ಲಿ ಈಗಾಗಲೇ ಜಾರಿಯಲ್ಲಿರುವಂತೆ ಕ್ರಯ ಪತ್ರಕ್ಕೆ 7ದಿನ, ಪೌತಿ ಖಾತೆಗೆ 15ದಿನಗಳ ಈ ನಿಯಮ ತುಂಬ ಯಶಸ್ವಿಯಾಗಿರುತ್ತದೆ. ಈ ಪದ್ಧತಿಯನ್ನು ಮುಂದುವರೆಸುವ ಬಗ್ಗೆ.

*****

**ಉತ್ತರ:** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕ್ರಮಬದ್ಧ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 ಮತ್ತು 11ಎ ಯನ್ನು ಪಡೆಯಲು ಆಸ್ತಿಯ ಮಾಲೀಕರು ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಡಿಜಿಟಲ್ ಸಹಿಯ ಮೂಲಕ ನಮೂನೆ-9 ಮತ್ತು 11ಎ ವಿತರಿಸುತ್ತಾರೆ.

ಕ್ರಮಬದ್ಧವಲ್ಲದ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ 11ಬಿ ಯನ್ನು ಪಡೆಯಲು ಆಸ್ತಿಯ ಮಾಲೀಕರು ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಡಿಜಿಟಲ್ ಸಹಿಯ ಮೂಲಕ ನಮೂನೆ 11ಬಿ ವಿತರಿಸುತ್ತಾರೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ವಿತರಿಸುವುದಕ್ಕೆ ವಿನಾಯಿತಿ ನೀಡಿ ನಮೂನೆ 11ಬಿ ಯನ್ನು ಕೈಬರಹದ ಮೂಲಕ ನೀಡಲು ಅವಕಾಶ ಕಲ್ಪಿಸಲಾಗಿದೆ.

ನಮೂನೆಗಳನ್ನು ವಿತರಿಸುವ ಸೇವೆಯು ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ರ ವ್ಯಾಪ್ತಿಗೆ ಸೇರ್ಪಟ್ಟಿದ್ದು, 45 ದಿನಗಳೊಳಗೆ ಅರ್ಜಿದಾರರು ನಿಯಮಗಳ ಪ್ರಕಾರ ಎಲ್ಲಾ ದಾಖಲಾತಿಗಳನ್ನು ಅವರು ಒದಗಿಸಿದ್ದಲ್ಲಿ ನೀಡಬೇಕಾಗಿರುತ್ತದೆ.

ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9, 11ಎ ಮತ್ತು 11ಬಿ ಗಳನ್ನು (ತೆರಿಗೆ ನಿರ್ಧರಣೆ ಪಟ್ಟಿ) ವಿತರಿಸಲು ಗ್ರಾಮ ಪಂಚಾಯತಿ ಸಭೆಯ ಅನುಮೋದನೆ ಅಗತ್ಯವಿದ್ದು, ಸದರಿ ಸಭೆಯನ್ನು ನಿಯಮಿತವಾಗಿ ಮತ್ತು ತ್ವರಿತವಾಗಿ ಮಾಡದ ಕಾರಣ ಮತ್ತು ಅರ್ಜಿಗಳನ್ನು ಜೇಷ್ಠತೆ ಆಧಾರದಲ್ಲಿ ವಿಲೇ ಮಾಡದಿರುವುದರಿಂದ ನಮೂನೆಗಳನ್ನು ವಿತರಿಸಲು ವಿಳಂಬವಾಗುತ್ತಿದ್ದು, ಮೊದಲು ಬಂದ ಅರ್ಜಿಯನ್ನು ಸ್ವೀಕೃತಿ ದಿನಾಂಕದ ಆಧಾರದ ಮೇಲೆ ಮೊದಲು ಇತ್ಯರ್ಥಪಡಿಸಲು (First In First Out-FIFO) ಕ್ರಮ ವಹಿಸುವಂತೆ ಹಾಗೂ ಸಕಾರಣವಿಲ್ಲದೆ ಅರ್ಜಿಗಳನ್ನು ತಿರಸ್ಕರಿಸುವುದು ಮತ್ತು ವಿಲೇ ಇಡದಂತೆ ಗ್ರಾಮ ಪಂಚಾಯತಿಗಳಿಗೆ ಸೂಚಿಸಲಾಗಿದೆ.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9, 11ಎ ಮತ್ತು 11ಬಿ ಗಳನ್ನು ವಿತರಿಸಲು ಅವಶ್ಯಕವಾಗಿರುವ ದಾಖಲೆಗಳ ಚೆಕ್‌ಲಿಸ್ಟ್‌ಗಳನ್ನು ಗ್ರಾಮ ಪಂಚಾಯತಿಗಳ ಸೂಚನಾ ಫಲಕಗಳಲ್ಲಿ ಕಡ್ಡಾಯವಾಗಿ ಅಳವಡಿಸುವ ಬಗ್ಗೆ ಕ್ರಮ ವಹಿಸುವಂತೆ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2021 ರ ಉಪ ನಿಯಮ 20 ರ ಕೆಳಕಂಡಂತಿದೆ.

**20. ಆಸ್ತಿ ವಿವರಗಳ ವಹಿಯಲ್ಲಿ ಮಾಲೀಕನ ಹೆಸರು, ಹಾಗೂ ವಿವರಗಳ ಸೇರ್ಪಡೆ ಮತ್ತು ಮಾರ್ಪಾಟು:** ಗ್ರಾಮ ಪಂಚಾಯತಿಯ ಆಸ್ತಿ ವಹಿಯಲ್ಲಿನ ವಿವರಗಳು ಅಂದರೆ ಮಾಲೀಕನ ಹೆಸರು, ಆಸ್ತಿಯ ಚೆಕ್ಕುಬಂದಿ, ಅಳತೆ, ತೆರಿಗೆಯ ವಿವರಗಳು ಆಸ್ತಿಯ ಮಾರಾಟ, ವಿಭಾಗ, ವರ್ಗಾವಣೆ, ದಾನ, ವಿಲ್, ಗಿಫ್ಟ್ ಡೀಡ್, ರಿಲೀಜ್ ಡೀಡ್, ಸೆಟಲ್‌ಮೆಂಟ್. ಅದಲು ಬದಲು, ಬ್ಯಾಂಕ್ ಮೂಲಕ ಹರಾಜು ಹಾಗೂ ಇತರೆ ಮೂಲಕ ಬದಲಾವಣೆಯಾದಲ್ಲಿ ಹಾಗೂ ಕಟ್ಟಡ/ಖಾಲಿ ಜಾಗದ ಸಂಬಂಧದಲ್ಲಿ ಹೊಸದಾಗಿ ನಿರ್ಮಿಸಿದ, ಪುನರ್ ನಿರ್ಮಿಸಿದ, ವಿಸ್ತರಿಸಿದ ವಿವರಗಳನ್ನು ಸೇರ್ಪಡೆ ಮತ್ತು ಮಾರ್ಪಾಟು ಮಾಡತಕ್ಕದ್ದು, ಹಾಗೂ ಮಾಲೀಕನ ಹೆಸರು ಬದಲಾವಣೆಗೆ ಅರ್ಜಿದಾರರು ಸಲ್ಲಿಸುವ ಕೋರಿಕೆಯೊಂದಿಗೆ ನೋಂದಾಯಿತ ದಾಖಲೆಗಳು, ಮರಣ ಪ್ರಮಾಣ ಪತ್ರ ಅಥವಾ ನ್ಯಾಯಾಲಯದ ಆದೇಶ, ಇತರೆ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು.

ಪರಂತು ಅಂಥ ವರ್ಗಾವಣೆ ಮಾಡುವ ಮೊದಲು ಅಥವಾ ಮೃತ ಒಡೆಯನ ಕಾನೂನು ಸಮ್ಮತ ವಾರಸುದಾರರ ಹೆಸರುಗಳನ್ನು ಗ್ರಾಮ ಪಂಚಾಯತಿಯ ದಾಖಲೆಗಳಲ್ಲಿ ಪ್ರತಿಯೋಜಿಸುವ ಮುನ್ನ ಗ್ರಾಮ ಪಂಚಾಯತಿಯು ಸದರಿ ವಿಷಯವನ್ನು ಸಾರ್ವಜನಿಕವಾಗಿ ಹಾಗೂ ಗ್ರಾಮ ಪಂಚಾಯತಿ ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸತಕ್ಕದ್ದು. ನೋಟಿಸಿನ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸ್ವೀಕೃತವಾದ ಆಕ್ಷೇಪಣೆ: ಸಲಹೆಗಳನ್ನು ಪರಿಗಣಿಸಿದ ನಂತರ ಗ್ರಾಮ ಪಂಚಾಯತಿಯ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳತಕ್ಕದ್ದು ಹಾಗೂ ನಿರ್ಧಾರವನ್ನು ಲಿಖಿತ ಮೂಲಕ ಅರ್ಜಿದಾರರಿಗೆ ತಿಳಿಸತಕ್ಕದ್ದು ಮತು ಗ್ರಾಮ ಪಂಚಾಯತಿಯ ದಾಖಲೆಗಳಲ್ಲಿ ಪ್ರತಿಯೋಜಿಸತಕ್ಕದ್ದು ಎಂದಿರುತ್ತದೆ.

ಮೇಲ್ಕಂಡಂತೆ ಗ್ರಾಮ ಪಂಚಾಯತಿಯು ಆಸ್ತಿಯ ಮಾಲೀಕನ ತೆರಿಗೆ ನಿರ್ಧರಣೆ ಪಟ್ಟಿಯಲ್ಲಿ (ನಮೂನೆ-9 & 11ಎ ಅಥವಾ 11ಬಿ) ಮಾರ್ಪಾಟು ಮಾಡಲು ಮೂವತ್ತು ದಿನಗಳೊಳಗೆ ನೋಟಿಸ್ ನೀಡಿ ಸ್ವೀಕೃತವಾದ ಆಕ್ಷೇಪಣೆ/ಸಲಹೆಗಳನ್ನು ಪರಿಗಣಿಸಿ ಗ್ರಾಮ ಪಂಚಾಯತಿಯು ಸಭೆ ನಡೆಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಕಂದಾಯ ಇಲಾಖೆಯಲ್ಲಿ ಜಮೀನಿಗೆ ಖಾತೆ ಬದಲಾವಣೆ ಮಾಡಲು ನಿಗದಿಪಡಿಸಿರುವ ಕಾಲಾವಧಿಯಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ತೆರಿಗೆ ನಿರ್ಧರಣಾ ಪಟ್ಟಿ (ನಮೂನೆ-9, 11ಎ ಅಥವಾ 11ಬಿ) ಯಲ್ಲಿ ಮಾರ್ಪಾಟು ಮಾಡಲು ಕಾಲಾವಧಿ ನಿಗದಿಪಡಿಸುವ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ:RDPR 676 GPA 2023

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.